ತಲಾ ಮೂರು ಮೂರು ಬೆರಳುಗಳನ್ನು ತೂರಿಸಿ ಕ್ಷಣ ಉಸಿರು ಬಿಗಿ ಹಿಡಿದು ಅರ್ಧ ಅಡಿ ಮೇಲೆ ಗುಂಡನ್ನು ಎತ್ತಿ, ದೊಪ್ಪನೆ ಬಿಟ್ಟು ಸೀದಾ ತನ್ನ ದುಖಾನಿನ ಕಡೆಗೆ ಹೋಗಿ ಬಿಡುತ್ತಾನೆ. ನರಸಿಂಹ ಚೌಧರಿ ಪಂದ್ಯದ ದುಡ್ಡನ್ನು ಜೇಬಿಗಿಳಿಸಿಕೊಳ್ಳುತ್ತಾನೆ. ಗೈಡ್ ಕೆಲಸ ಮುಗಿಸಿ ಬಂದು ಪಂದ್ಯದಲ್ಲಿ ಗೆದ್ದ ಅರ್ಧ ಹಣವನ್ನು ಬೇಡ ಬೇಡವೆಂದರೂ ಸಲೀಮನ ಜೇಬಿಗೆ ತುರುಕುತ್ತಾನೆ. ಇಬ್ಬರೂ ಜೊತೆಯಲ್ಲಿ ಅಲ್ಲೇ ಪಕ್ಕದಲ್ಲಿರುವ ಯೂಸುಫ್ ಹೈದರಾಬಾದ್ ಬಿರಿಯಾನಿ ಅಡ್ಡದಲ್ಲಿ ಬಿರಿಯಾನಿ ತಿಂದು ಖಡಕ್ ಚಾ ಕುಡಿದು ಸಂಭ್ರಮಿಸುತ್ತಾರೆ. ತಿಂಗಳಲ್ಲಿ ಎರಡು ಬಾರಿಯಾದರೂ ಇಂಥ ವಿದ್ಯಮಾನ ನಡೆದೇ ನಡೆಯುತ್ತದೆ. ಇಂದು ಕೂಡ ಸುಮಾರು ಹನ್ನೊಂದೂವರೆ ಗಂಟೆ ಸಮಯದಲ್ಲಿ ನರಸಿಂಹ ಚೌಧರಿ ಕರೆದಾಗ ಸಲೀಂ ಹೋಗಿ ಗುಂಡನ್ನು ಅರ್ಧ ಅಡಿ ಎತ್ತಿ ಬಂದಿದ್ದ. ಆದರೆ ಸಲೀಮನ ಗುಂಡು ಎತ್ತುವ ಪರಾಕ್ರಮದ ದೃಶ್ಯವನ್ನು ಅವಳು ನೋಡಿಬಿಟ್ಟಿದ್ದಳು! ಅವಳು ನೋಡಿದ ಸಂಗತಿ ಸಲೀಮನಿಗಾಗಲೀ, ನರಸಿಂಹ ಚೌಧರಿಗಾಗಲೀ, ಬೆಟ್ಸ್ ಕಟ್ಟಿದ್ದ ಯುವಕರ ಗುಂಪಿಗಾಗಲೀ ಅರಿವಿಗೆ ಬಂದಿರಲಿಲ್ಲ. ಮಧ್ಯಾಹ್ನ ನರಸಿಂಹ ಚೌಧರಿ ಬಂದು ಸಲೀಮನ ಜೊತೆಯಲ್ಲಿ ಬಿರಿಯಾನಿ ತಿಂದು, ಚಹ ಕುಡಿದು ಬೇಡ ಬೇಡವೆಂದರೂ ಸಲೀಮನ ಜೇಬಿಗೆ ಐದು ನೂರು ಇಟ್ಟು ಮತ್ತೆ ಕೋಟೆಯ ಕಡೆ ಹೊರಟು ಹೋಗಿದ್ದ. ಸಲೀಂ ಉತ್ಸಾಹ ಭರಿತನಾಗಿ ಅತ್ತರು ಮಾರುವ ಕೆಲಸದಲ್ಲಿ ತೊಡಗಿಕೊಂಡ. ಆದರೆ ಅವಳಿಗೆ ಮಾತ್ರ ಸಲೀಂ ಸೀಸದ ಗುಂಡನ್ನು ಎತ್ತಿದ ಸಂಗತಿಯನ್ನು ಮರೆಯಲಾಗಲಿಲ್ಲ!

ಸಂಜೆ ಸುಮಾರು ನಾಲ್ಕು ಗಂಟೆಗೆ ಕಪ್ಪನೆಯ ಬೆಂಜ್ ಕಾರೊಂದು ಬಂದು ಗೋಲ್ಕೊಂಡ ಕೋಟೆಯ ಪ್ರವೇಶ ದ್ವಾರದ ಮುಂದಿನ ರಸ್ತೆಯಲ್ಲಿ ನಿಂತಿತ್ತು. ಅದರೊಳಗಿಂದ ಮುದ್ದಾದ ಚಂದನದ ಗೊಂಬೆಗೆ ಶುಭ್ರ ಶ್ವೇತವರ್ಣದ ಬಟ್ಟೆ ತೊಡಿಸಿದಂತೆ ಕಾಣುವ ಹದಿನೆಂಟಿಪ್ಪತ್ತು ವಯಸ್ಸಿನ ಪೋರಿಯೊಬ್ಬಳು ಇಳಿದಿದ್ದಳು. ಅವಳು ಧರಿಸಿದ್ದ ಕಪ್ಪು ರೇಬಾನ್ ಕೂಲಿಂಗ್ ಗ್ಲಾಸಿನಲ್ಲಿ ಇಡೀ ಆ ಏರಿಯಾ ಸೆರೆಯಾದಂತೆ ಕಾಣುತ್ತಿತ್ತು. ಸುತ್ತಮುತ್ತಲಿದ್ದವರ ಕಣ್ಣುಗಳೆಲ್ಲಾ ಆ ಪೋರಿಯ ಸುಂದರ ನಡಿಗೆಯಲ್ಲಿ ನೆಲೆಗೊಂಡಿದ್ದವು. ಅವಳು ನಡೆದುಕೊಂಡು ಸೀದಾ ಸಲೀಮನ ಅತ್ತರು ಗಾಡಿಯ ಮುಂದೆ ನಿಂತಿದ್ದಳು. ಸಲೀಮ್ ಅವಳನ್ನು ನೋಡಿ,

''ಬನ್ನಿ ಮೇಮ್‌ಸಾಬ್ ಯಾವ ಅತ್ತರು ಬೇಕು ನಿಮಗೆ? ಗುಲಾಬಿ, ಮಲ್ಲಿಗೆ, ಸಂಪಿಗೆ, ಸುಗಂಧ ರಾಜ...'' ಮುಖವರಳಿಸಿ ಕೇಳಿದ್ದ. ಅವಳು ಕಣ್ಣಿಗೆ ಹಾಕಿದ್ದ ಕೂಲಿಂಗ್ ಗ್ಲಾಸನ್ನು ತೆಗೆದು ಕೈಯಲ್ಲಿ ಹಿಡಿದು, ''ನನಗೆ ನಿನ್ನ ಹತ್ತಿರ ಇರುವ ಈ ಎಲ್ಲಾ ಅತ್ತರೂ ಬೇಕು, ಅತ್ತರಿನ ಒಟ್ಟು ಬೆಲೆಯೆಷ್ಟು...'' ಎಂದು ತುಟಿಯರಳಿಸಿ ಕೇಳಿದ್ದಳು. ಅಂಥ ಸುಂದರಿಯೊಬ್ಬಳು ತನ್ನ ಹತ್ತಿರ ಅತ್ತರು ಖರೀದಿಸಿದ ನೆನಪೇ ಸಲೀಮನ ಮನಸ್ಸನ್ನೆಲ್ಲ ತಡಕಾಡಿದರೂ ಸುಳಿದಿರಲಿಲ್ಲ. ''ತಮಾಷೆ ಮಾಡ್ಬೇಡಿ ಮೇಮ್‌ಸಾಬ್, ನಾನೊಬ್ಬ ಚಿಲ್ಲರೆ ವ್ಯಾಪಾರಿ. ಅತ್ತರು ಮಾರಿ ಅಮ್ಮ, ತಂಗಿಯರನ್ನು ಸಾಕುತ್ತಿರುವವನು ನಾನು...'' ಮಾಮೂಲಿ ವಿನಯವಿತ್ತು ಸಲೀಮನ ಮಾತುಗಳಲ್ಲಿ.

''ನಾನೇನೂ ತಮಾಷೆ ಮಾಡುತ್ತಿಲ್ಲ, ಮುಂದಿನ ತಿಂಗಳು ನನ್ನ ದೊಡ್ಡಮ್ಮನ ಮಗಳ ಮದುವೆಯಿದೆ. ಗೆಳತಿಯರಿಗೆ ಹಂಚಲು ಅತ್ತರು ಬೇಡವೆ...'' ನಕ್ಕಿದ್ದಳು ಕೆನ್ನೆಗಳೆರಡೂ ಕುಳಿ ಬೀಳುವಂತೆ. ಅವಳ ನಗುವಿನ ಕುಳಿಯಲ್ಲಿ ಸಿಲುಕಿ ಒದ್ದಾಡುತ್ತಾ ಸಲೀಂ, ''ನಿಮ್ಮಂಥವರು ದೊಡ್ಡ ದೊಡ್ಡ ಮಾಲುಗಳಲ್ಲಿ ಖರೀದಿಸುತ್ತೀರಿ, ಫುಟ್‌ಪಾತ್ ಮೇಲೆ ಮಾರುವ ಅತ್ತರು ನಿಮಗೆ ಒಗ್ಗುತ್ತದಾ ಮೇಮ್‌ಸಾಬ್...'' ಎಂದಿದ್ದ. ''ಅರೆ, ಬಾಪ್ರೇ ಎಂಥ ವ್ಯಾಪಾರಿಯಾದೆ ನೀನು. ಇಂಥವರು ಇಂತಿಂಥ ಕಡೆಯೇ ಖರೀದಿಸಬೇಕೆಂಬ ಕಾನೂನಿನೇನಾದರೂ ಇದೆಯಾ...'' ಮತ್ತೆ ನಕ್ಕು ನುಡಿದಿದ್ದಳು. ''ಛೇ ಅಂಥದ್ದೇನೂ ಇಲ್ಲ ಮೇಮ್‌ಸಾಬ್... ಒಟ್ಟು ಖರೀದಿಸುತ್ತೇನೆಂದು ಕೇಳಿದಿರಲ್ಲ ಅದಕ್ಕೆ ಹೇಳಿದೆ...'' ಒಂದಿಷ್ಟು ನಾಚಿಕೆ ತುಂಬಿಕೊಂಡು ಹೇಳಿದ್ದ. ''ಈಗಲೂ ಅದೇ ಹೇಳುತ್ತಿದ್ದೇನೆ. ಖಂಡಿತವಾಗಿಯೂ ಈ